ಶ್ರೀಮತಿ ಮನೋರಮಾ ಮಧ್ವರಾಜ್ —ತಮ್ಮ ಕಳಕಳಿಯನ್ನು ಇಲ್ಲಿ ವ್ಯಕ್ತಪಡಿಸಿದ್ದೀರಿ. ಈ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಆರೋಗ್ಯ ಘಟಕ ಹಾಗೂ ಕೇಂದ್ರಗಳು

೩೨೫. ಶ್ರೀ ಶಂಕರಮೂರ್ತಿ ಮೋಟಮ್ಮ (ಮೂಡಿಗೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಇರುವ ಆರೋಗ್ಯ ಘಟಕಗಳ ಹಾಗೂ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

(ಆ) ಇವುಗಳ ಪೈಕಿ ಯಾವ ಯಾವ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಆರೋಗ್ಯ ಘಟಕಗಳಲ್ಲಿ ವೈದ್ಯಾಧಿಕಾರಿಗಳು ಇರುವುದಿಲ್ಲ ಹಾಗೂ ಯಾವಾಗ ಭರ್ತಿ ಮಾಡಲಾಗುವುದು

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ೫ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ೧೦ ಪ್ರಾಥಮಿಕ ಆರೋಗ್ಯ ಘಟಕಗಳು ಇವೆ.

(ಆ) ಪ್ರಾಥಮಿಕ ಆರೋಗ್ಯ ಕೇಂದ್ರ ಬಾಳೆಹೊಳೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಕಳಸ ಇಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಯು ಖಾಲಿ ಇವೆ. ಆದಷ್ಟು ಬೇಗ ಭರ್ತಿ ಮಾಡಲಾಗುವುದು.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಪ್ಪು ಉತ್ತರವನ್ನು ಕೇವಲ ೨ ಆಸ್ಪತ್ರೆಗಳಲ್ಲಿ ಅಂದರೆ ಕಳಸ ಮತ್ತು ಬಾಳೆಹೊಳೆ ಕೇಂದ್ರಗಳಲ್ಲಿ ಮಾತ್ರ ಮಹಿಳಾ ವೈದ್ಯರು ಇಲ್ಲವೆಂದು ಹೇಳಿದ್ದಾರೆ ಈ ಊರುಗಳಿಗೆ ಕಳೆದ ೫-೬ ವರ್ಷಗಳಿಂದ ಯಾವ ಮಹಿಳಾ ವೈದ್ಯರನ್ನು ಪೋಸ್ಟ್ ಮಾಡಿದರೂ ಯಾರೂ ಕೂಡ ಬರುತ್ತಿಲ್ಲ. ಇದರ ಜೊತೆಗೆ ಮೂಡಿಗೆರೆ ಮತ್ತು ಹರೇಬೈಲ್ ಆಸ್ಪತ್ರೆಗಳಲ್ಲಿ ವೈದ್ಯರೇ ಇಲ್ಲ. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆದರೆ ಅವರ ಉತ್ತರದಲ್ಲಿ ಕೇವಲ ೨ ಆಸ್ಪತ್ರೆಗಳಲ್ಲಿ ಮಾತ್ರ ಮಹಿಳಾ ವೈದ್ಯರಿಲ್ಲವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ ಪೋಸ್ಟಿಂಗ್ಸ್ ಮಾಡುತ್ತೇವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ. ಆದಷ್ಟು ಶೀಘ್ರವಾಗಿ ಎಂದು ತಾವು ಹೇಳಬಹುದು. ಜನರಿಗೆ ಏನೂ ಗೊತ್ತಾಗುವುದಿಲ್ಲವೆಂದು ತಾವು ತಿಳಿದಿರಬಹುದು ಆದರೆ ಈಗ ಜನರು ಬಹಳ ಬುದ್ಧಿವಂತರಾಗಿದ್ದಾರೆ. ಅವರು ನಮ್ಮನ್ನು ಕೇಳುತ್ತಾರೆ, ಸರ್ಕಾರದವರು ವೈದ್ಯರನ್ನು ಇಲ್ಲಿಗೆ ನೇಮಕ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ, ಆದರೆ ಇದುವರೆಗೂ ಏತಕ್ಕೆ ಅವರು ಬರಲಿಲ್ಲ ಎಂದು ಕೇಳುತ್ತಾರೆ. ಆದ್ದರಿಂದ ಆದಷ್ಟು ಬೇಗ, ಆದಷ್ಟು ಶೀಘ್ರ ಎಂಬ ಮಾತನ್ನು ಬಿಟ್ಟು ಈ ಪಿ.ಹೆಚ್.ಯು ಮತ್ತು ಪಿ ಹೆಚ್.ಸಿ. ಗಳಿಗೆ ಎಷ್ಟು ದಿವಸದಲ್ಲಿ ಮಹಿಳಾ ವೈದ್ಯರನ್ನು ಪೋಸ್ಟಿಂಗ್ಸ್ ಮಾಡುತ್ತೀರೆಂಬುದನ್ನು ಖಚಿತವಾಗಿ ತಿಳಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್ —ಮಾನ್ಯ ಅಧ್ಯಕ್ಷರೇ ಈಗ ಹೇಳಬೇಕಾದರೆ ಮಹಿಳಾ ವೈದ್ಯಾಧಿಕಾರಿಗಳ ೫೫ ಹುದ್ದೆಗಳು ಖಾಲಿ ಇವೆ ಅವನ್ನೆಲ್ಲಾ ಭರ್ತಿ ಮಾಡಬೇಕಾದರೆ ಮಾನ್ಯ ಆರ್ಥ ಸಚಿವರು ನಾವು ಎಲ್ಲ ಕಡೆಯೂ ವಿಚಾರ ವಿನಿಮಯ ಮಾಡಿದಾಗ, ಎಕಾನಮಿ ಇದ್ದ ಬ್ಯಾನನ್ನು ಹಿಂದೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಪಿ ಎಸ್. ಕಮಿಷನ್ ಅವರು ನಮಗೆ ಒಂದು ಲಿಸ್ಟನ್ನು ಕಳುಹಿಸಿಕೊಡಬೇಕಾಗುತ್ತದೆ. ಅವರು ಲಿಸ್ಟನ್ನು ಕಳುಹಿಸಿಕೊಟ್ಟ ಮೇಲೆ ಮಹಿಳಾ ವೈದ್ಯಾಧಿಕಾರಿಗಳನ್ನು ಹಾಕಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಈಗಿರುವ ಪರಿಸ್ಥಿತಿಯಲ್ಲಿ ವೈದ್ಯಾಧಿಕಾರಿಗಳನ್ನು ಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ.

ಮಂಗನ ಕಾಯಿಲೆಯಿಂದಾದ ಸಾವುಗಳು

೬೧೨. ಶ್ರೀ ಆರ್. ಎಸ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೯೫-೯೬ನೇ ಸಾಲಿನಲ್ಲಿ ಮಂಗನ ಕಾಯಿಲೆಯಿಂದ ಎಷ್ಟು ಜನರು ಮೃತರಾಗಿದ್ದಾರೆ ?